2. ಎತ್ತಿನಗಾಡಿಯ ರಸ್ತೆಯನ್ನು ಒತ್ತುವರಿ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

3. ಹಾಗಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಕಂದಾಯ ಸಚಿವರು):

ಅ) 7572.18 ಎಕರೆಗಳು

ಆ) ಹೌದು (178.20 ಎಕರೆಗಳು)

ಇ) ಹೋಬಳಿ ಹಂತದಲ್ಲಿ ಒತ್ತುವರಿದಾರರನ್ನು ಖಾಲಿ ಮಾಡಿಸಲು ಕ್ರಮ ಕೈಗೊಳ್ಳಲಾಗಿದೆ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಜಿ. ಪುಟ್ಟಸ್ವಾಮಿ ಗೌಡ : (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೇ, ದಿನಾಂಕ 21-3-91ರ ಲಿಖಿತ ಮೂಲಕ ಉತ್ತರಿಸುವ 14 ನೇ ಪಟ್ಟಿಯಲ್ಲಿರುವ 84 ಪ್ರಶ್ನೆಗಳ ಪೈಕಿ, ಪ್ರಶ್ನೆ ಸಂಖ್ಯೆ 1449, 1451, 1742, 1684, 1704, 1685, 1727, 349, 1721, 1769, 1708, 1696, 17555, 1753, 1713, 1766, 340 ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನುಳಿದ 58 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉ. ಕನ್ನಡ ಜಿಲ್ಲೆಯಲ್ಲಿ ಖಾಲಿ ಇರುವ ವಿಲೇಜ್ ಅಕೌಂಟೆಂಟ್ ಮತ್ತು ರೆವಿನ್ಯೂ ಇನ್ಸ್‌ಪೆಕ್ಟರ್‌ಗಳ ಹುದ್ದೆಗಳನ್ನು ತುಂಬುವುದು..

1720 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಗ್ರಾಮಲೆಕ್ಕಿಗರು ಮತ್ತು ಕಂದಾಯ ನಿರೀಕ್ಷಕರ ಹುದ್ದೆಗಳೆಷ್ಟು?

ಆ) ಇವುಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ.

ಇ) ಈ ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಒಟ್ಟು ಗ್ರಾಮ ಲೆಕ್ಕಿಗರು - 274 ಒಟ್ಟು ಕಂದಾಯ ನೀರಿಕ್ಷಕರು 35

ಆ) ಗ್ರಾಮಲೆಕ್ಕಿಗರ ಮತ್ತು ಕಂದಾಯ ನಿರೀಕ್ಷಕರ ಖಾಲಿ ಹುದ್ದೆಗಳ ತಾಲ್ಲೂಕುವಾರು ವಿವರ ಕೆಳಗಿನಂತಿದೆ.

	ಗ್ರಾ.ಲೆ.	ಕಂ.ನಿ
ಕಾರವಾರ	12	-
ಅಂಕೋಲಾ	7	-
ಕುಮಟಾ	11	-
ಹೊನ್ನಾವರ	8	1
ಭಟಕಲ್	7	-

ಸಿರ್ಸಿ	8	-
ಸಿದ್ದಾಪುರ	5	-
ಯಲ್ಲಾಪುರ	5	-
ಮುಂಡಗೋಡ	2	-
ಹಳಿಯಾಳ	5	-
ಜೋಯಿಡಾ	-	-
	70	1

ಇ) ಖಾಲಿ ಹುದ್ದೆಗಳನ್ನು ಬೇಗ ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ಬೆಳೆವಿಮಾ ಯೋಜನೆ

1767 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ರಾಜ್ಯದಲ್ಲಿ ಬೆಳೆ ವಿಮಾ ಯೋಜನೆಯನ್ನು ಜಾರಿಗೆ ತರಲಾಗಿದೆಯೇ?*

ಆ) *ಹಾಗಿದ್ದಲ್ಲಿ, ಯಾವಾಗಿನಿಂದ ಮತ್ತು ಯಾವ ಯಾವ ಬೆಳೆಗಳಿಗೆ ಈ ವಿಮಾಯೋಜನೆ ಅನ್ವಯಿಸುತ್ತದೆ.*

ಇ) *ಕಳೆದ ಐದು ವರ್ಷಗಳಿಂದ ಈ ಬೆಳೆ ವಿಮಾಯೋಜನೆಯಲ್ಲಿ ರಾಜ್ಯದ ರೈತರು ಒಟ್ಟಾರೆ ಆಗಿರುವ ಪ್ರಯೋಜನವೆಷ್ಟು?*

ಶ್ರೀ ಜಿ.ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು):

ಅ) ಹೌದು

ಆ) ಸಮಗ್ರ ಬೆಳೆ ವಿಮಾ ಯೋಜನೆಯು ರಾಜ್ಯದಲ್ಲಿ 1985 ಮುಂಗಾರು ಹಂಗಾಮಿನಿಂದ ಜಾರಿಯಲ್ಲಿರುತ್ತದೆ. ಈ ಯೋಜನೆ ಯಡಿಯಲ್ಲಿ ಬರುವ ಬೆಳೆಗಾಳಾವುವೆಂದರೆ ಭತ್ತ, ಜೋಳ, ಗೋಧಿ, ರಾಗಿ, ಮುಸುಕಿನ ಜೋಳ, ಸಜ್ಜೆ, ತೊಗರಿ, ಕಡಲೆ, ಶೇಂಗಾ ಸೂರ್ಯಕಾಂತಿ ಮತ್ತು ಕುಸುಮೆ.

ಇ) ಕಳೆದ ಐದುವರ್ಷಗಳಿಂದ (1985 - 86 ರಿಂದ 89 - 90ರವರೆಗೆ) 1.61 ಲಕ್ಷ ರೈತರು 14.86 ಕೋಟಿ ರೂ. ಗಳನ್ನು ನಷ್ಟ ಪರಿಹಾರ ಧನವನ್ನು ಪಡೆದು ಈ ಯೋಜನೆಯ ಪ್ರಯೋಜನವನ್ನು ಪಡೆದಿರುತ್ತಾರೆ.

ರಾಜ್ಯದಲ್ಲಿ ಖಾಲಿ ಇರುವ ತಹಶೀಲ್ದಾರ್, ವಿಶೇಷ ತಹಶೀಲ್ದಾರ್ ಹಾಗೂ ಸಬ್‌ರಿಜಿಸ್ಟ್ರಾರ್ ಹುದ್ದೆಗಳನ್ನು ತುಂಬುವುದು.

1452 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೇ?

ಅ) *ರಾಜ್ಯದಲ್ಲಿರುವ ತಹಶೀಲ್ದಾರ್ ವಿಶೇಷ ತಹಶೀಲ್ದಾರ್ ಮತ್ತು ಸಬ್ ರಿಜಿಸ್ಟ್ರಾರ್‌ಗಳ ಒಟ್ಟು ಹುದ್ದೆಗಳೆಷ್ಟು?*

ಆ) *ಇವುಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ.*

ಇ) *ಈ ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು):